**<u>ಪ್ರಧಾನ ಸಿವಿಲ್ ನ್ಯಾಯಾಲಯ, ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು</u>**

**<u>ದಾವಾ ಸಂಖ್ಯೆ:63/2012</u>**

ಪಿಡಬ್ಲ್ಯು:2
ಪ್ರಮಾಣ ವಚನ ಬೋಧಿಸಲಾಯಿತು
ದಿನಾಂಕ: 01.02.2024

**<u>ಪಾಟೀ ಸವಾಲು: 3 ಮತ್ತು 4 ನೇ ಪ್ರತಿವಾದಿಗಳ ಪರ ಶ್ರೀ ವಿ.ಕೆ. ವಕೀಲರಿಂದ</u>**

ನನ್ನ ತಂದೆಗೆ ನಾನು ಮತ್ತು ನನ್ನ ಅಣ್ಣ ಇಬ್ಬರು ಮಕ್ಕಳಿರುತ್ತೇವೆ. ನಮ್ಮ ಕುಟುಂಬದ ವಂಶವೃಕ್ಷವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೆನೋ ಇಲ್ಲವೋ ನನಗೆ ಗೊತ್ತಿಲ್ಲ. 1 ನೇ ಪ್ರತಿವಾದಿ ವಸಂತ ರವರು ನನ್ನ ಚಿಕ್ಕಪ್ಪ. ನನ್ನ ತಂದೆ ಮತ್ತು ನನ್ನ ಚಿಕ್ಕಪ್ಪ ಆಸ್ತಿಗಳನ್ನು ವಿಭಾಗ ಮಾಡಿಕೊಂಡಿರುತ್ತಾರೆ. ಬಸಾಪುರದ ಸರ್ವೆನಂ. 64 ಮತ್ತು ಸಿಂಗಸಂದ್ರದ ಒಂದು ಮನೆಯನ್ನು ವಿಭಾಗ ಮಾಡಿಕೊಂಡಿರುತ್ತಾರೆ. ಇತರೆ ಯಾವ ಸ್ವತ್ತುಗಳನ್ನು ಭಾಗ ಮಾಡಿಕೊಂಡಿದ್ದಾರೆ ಎಂದು ನನಗೆ ಗೊತ್ತಿಲ್ಲ.

2. ನನ್ನ ಜನ್ಮ ದಿನಾಂಕ: 13.06.1992. ನಾನು ಬಿ.ಬಿ.ಎಂ. ವ್ಯಾಸಂಗ ಮಾಡಿರುತ್ತೇನೆ. ನನಗೆ 2016 ನೇ ಇಸವಿಯಲ್ಲಿ ಮದುವೆಯಾಗಿರುತ್ತದೆ. ಮದುವೆಯಾದ ನಂತರ ನನ್ನ ಗಂಡನ ಮನೆಯಲ್ಲಿ 2 ವರ್ಷ ಇದ್ದೆ, ಈಗ ನನ್ನ ತಾಯಿಯ ಮನೆಯಲ್ಲಿ ಇರುತ್ತೇನೆ. ನನ್ನ ಅಣ್ಣ ಬಿ.ಸಿ.ಎ. ವ್ಯಾಸಂಗ ಪೂರ್ಣಗೊಳಿಸಿರುವುದಿಲ್ಲ. ನನ್ನ ಅಣ್ಣ ಕೂಡ್ಲು ಗ್ರಾಮದಲ್ಲಿ ವಾಸವಾಗಿರುತ್ತಾರೆ.

3. ನನ್ನ ತಂದೆ ಮತ್ತು ನನ್ನ ಚಿಕ್ಕಪ್ಪನ ನಡುವೆ ಭಾಗವಾದ ವಿಭಾಗ ಪತ್ರ ನಮ್ಮ ಬಳಿ ಇರುವುದಿಲ್ಲ. ನನ್ನ ತಂದೆ ಮತ್ತು ನನ್ನ ಚಿಕ್ಕಪ್ಪನ ನಡುವೆ ಯಾವುದೇ ಭಾಗ ಆಗಿಲ್ಲ ಎಂದರೆ ಸರಿಯಲ್ಲ. ನನ್ನ ಜೊತೆಯಲ್ಲಿ ನ್ಯಾಯಾಲಯಕ್ಕೆ ನನ್ನ ಅಣ್ಣ ಬಂದಿರುವುದಿಲ್ಲ, ನನ್ನ ಗಂಡ ಬಂದಿರುತ್ತಾರೆ. ನನ್ನ ತಂದೆಯ ಹೆಸರಿನಲ್ಲಿ ಯಾವೆಲ್ಲಾ ಆಸ್ತಿಗಳು ಇದ್ದವು ಎಂದು ನಾನು ಯಾವುದೇ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ.

This is a True Copy of the Court Records Online. Authenticated @ districts.ecourtsindia.com/cnr/KABR030000992012/truecopy/order-3.pdf

4. ನಿ.ಪಿ.1 - ದಾನಪತ್ರವನ್ನು ನನ್ನ ತಾತ ನನ್ನ ತಂದೆಗೆ ಮಾಡಿಕೊಟ್ಟಿರುತ್ತಾರೆ. ಸದರಿ ದಾನಪತ್ರವನ್ನು ನಾನು ಓದಿ ತಿಳಿದುಕೊಂಡಿರುತ್ತೇನೆ. ಸದರಿ ದಾನಪತ್ರವನ್ನು ಬಸಾಪುರ ಗ್ರಾಮದ ಸರ್ವೆ ನಂ.64 ಕ್ಕೆ ನೀಡಲಾಗಿರುತ್ತದೆ. ಮೂಲ ದಾನಪತ್ರ ಯಾರ ಬಳಿ ಇದೆ ಎಂದು ನನಗೆ ಗೊತ್ತಿಲ್ಲ. ಬಸಾಪುರ ಗ್ರಾಮದ ಸರ್ವೆ ನಂ.64 ರ ಜಮೀನು ಯಾವ ರೀತಿ ಬಂತು ಎಂದು ತೋರಿಸಲು ನಾನು ನ್ಯಾಯಾಲಯಕ್ಕೆ ದಾಖಲೆಯನ್ನು ಹಾಜರುಪಡಿಸಿರುತ್ತೇನೆ. ಈಗ ನ್ಯಾಯಾಲಯದ ಮುಂದೆ ವಾದಿಗಳ ಪರ ಹಾಜರುಪಡಿಸಿದ ದಾಖಲಾತಿಗಳನ್ನು ಸಾಕ್ಷಿಗೆ ತೋರಿಸಿ ಅವುಗಳಲ್ಲಿ ನಿಮ್ಮ ತಂದೆಗೆ ಸದರಿ ಆಸ್ತಿ ಯಾವ ರೀತಿ ಬಂತು ಎಂಬ ದಾಖಲೆ ಇದೆಯಾ ಎಂದು ಕೇಳಲಾಗಿ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ.

5. ಸರ್ವೆ ನಂ.64 ರಲ್ಲಿ ನನ್ನ ತಂದೆಗೆ 3 ಎಕರೆ ಜಮೀನು ದಾನಪತ್ರದ ಮುಖಾಂತರ ನೀಡಲಾಗಿರುತ್ತದೆ. ನಾವು ದಾನಪತ್ರವನ್ನು ಸೃಷ್ಟಿ ಮಾಡಿಕೊಂಡಿರುವುದರಿಂದ ಮೂಲ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆ ಮೃತಪಟ್ಟ ನಂತರ ಈ ದಾವೆಯ ಬಗ್ಗೆ ನಾನು ಓದಿ ತಿಳಿದುಕೊಂಡಿರುತ್ತೇನೆ. ಈ ದಾವೆಯಲ್ಲಿ ಮಧ್ಯಂತರ ಅರ್ಜಿಗಳ ಬಗ್ಗೆ ನಾನು ತಿಳಿದುಕೊಂಡಿರುವುದಿಲ್ಲ. ಮಧ್ಯಂತರ ಅರ್ಜಿಯ ಮೇಲೆ ಆದಂತಹ ಆದೇಶದ ಮೇಲೆ ನನ್ನ ತಂದೆ ಮೇಲ್ಮನವಿ ಸಲ್ಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ.

6. ನನ್ನ ತಂದೆಯ ಹೆಸರಿನಲ್ಲಿ 2011 ನೇ ಇಸವಿಯಲ್ಲಿ ಪಹಣಿ ಇರುತ್ತವೆ. ನಿ.ಪಿ. 4 - ಪಹಣಿಯಲ್ಲಿ ಕೋರ್ಟ್ ಆದೇಶ ಎಂದು ನಮೂದಾಗಿದೆ ಎಂದರೆ ನಿಜ. ಸದರಿ ಆದೇಶವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ದಾವಾ ಸ್ವತ್ತು ಪೋಡಿ ದುರಸ್ತಾಗಿದೆಯಾ ಎಂದು ನಾನು ತಿಳಿದುಕೊಂಡಿರುವುದಿಲ್ಲ. ನಿ.ಪಿ.5 - ಪಹಣಿಯಲ್ಲಿ ಎ.ಡಿ.ಎಲ್.ಆರ್.8/89-90 ರಂತೆ ದುರಸ್ತಿ ಮಾಡಲಾಗಿದೆ ಎಂದು ನಮೂದು ಮಾಡಲಾಗಿದೆ ಎಂದರೆ ನಿಜ. ಸದರಿ ದುರಸ್ತಿ ದಾಖಲೆಯನ್ನು ನಾನು

This is a True Copy of the Court Records Online. Authenticated @ districts.ecourtsindia.com/cnr/KABR030000992012/truecopy/order-3.pdf

www.ecourtsindia.com

ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ಸದರಿ ಆದೇಶ ಏನು ಎಂದು ನನಗೆ ಗೊತ್ತಿಲ್ಲ. ಸದರಿ ಎ.ಡಿ.ಎಲ್.ಆರ್. ಆದೇಶ ಗೋವಿಂದರೆಡ್ಡಿಯವರ ಹೆಸರಿನಲ್ಲಿ ಆಗಿರುವುದರಿಂದ ನಾವು ಆ ಆದೇಶವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ.

7. ಈ ದಾವೆಯಲ್ಲಿ ಆದಂತಹ ಮಧ್ಯಂತರ ಅರ್ಜಿಯ ಆದೇಶದ ಮೇಲೆ ಮಾನ್ಯ ಹಿರಿಯ ಸಿವಿಲ್ ನ್ಯಾಯಾಲಯದಲ್ಲಿ ನನ್ನ ತಂದೆ ಮೇಲ್ಮನವಿ ಸಲ್ಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ನ್ಯಾಯಾಲಯಕ್ಕೆ ಸದರಿ ಆದೇಶವನ್ನು ಮರೆಮಾಚುವ ಉದ್ದೇಶದಿಂದ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ.

8. ವಡ್ಡರ ಗುರ್ರಪ್ಪ ಎಂದರೆ ನನ್ನ ತಾತ. ನನ್ನ ತಾತ ಮುನಿರೆಡ್ಡಿ ರವರ ವಿರುದ್ಧ ಭೂ ದಾಖಲೆಗಳ ಇಲಾಖೆಯಲ್ಲಿ ಮೇಲ್ಮನವಿಗಳನ್ನು ಹಾಕಿದ್ದು, ಅವು ವಜಾ ಆಗಿವೆ ಎಂದರೆ ನನಗೆ ಗೊತ್ತಿಲ್ಲ. ಸರ್ವೆ ನಂ.64 ರ ಮೂರು ಎಕರೆ ಜಮೀನನ್ನು ಗೋವಿಂದರೆಡ್ಡಿರವರು ಭೂ ಪರಿವರ್ತನೆ ಮಾಡಿಸಿಕೊಂಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಸ್ವತ್ತನ್ನು ನನ್ನ ತಂದೆ ತೀರಿಕೊಂಡ ನಂತರ ನಾನು ನೋಡಿರುತ್ತೇನೆ. ದಾವಾ ಸ್ವತ್ತಿನಲ್ಲಿ ನಾನು ಸಾಗುವಳಿ ಮಾಡುತ್ತಿಲ್ಲ. ದಾವಾ ಸ್ವತ್ತಿನ ಯಾವುದೇ ಭಾಗದಲ್ಲಿ ನಾವು ವಾಸವಿಲ್ಲ ಮತ್ತು ಅನುಭೋಗದಲ್ಲಿ ಇಲ್ಲ ಎಂದರೆ ಸರಿಯಲ್ಲ. ಯಾವುದೇ ಆಧಾರವಿಲ್ಲದೇ ನನ್ನ ತಂದೆಯ ಹೆಸರಿಗೆ ದಾನಪತ್ರ ಬರೆದಿದ್ದು, ಸದರಿ ದಾಖಲೆಯ ಆಧಾರದ ಮೇಲೆ ಈ ಸುಳ್ಳು ದಾವೆಯನ್ನು ಹೂಡಿದ್ದೇನೆ ಎಂದರೆ ಸರಿಯಲ್ಲ. ನನ್ನ ತಂದೆ ಮತ್ತು ನನ್ನ ತಾತ ಎ.ಡಿ.ಎಲ್.ಆರ್ ಮತ್ತು ಡಿ.ಡಿ.ಎಲ್.ಆರ್. ರವರ ಮುಂದೆ ಸಾಕಷ್ಟು ಪ್ರಕರಣಗಳನ್ನು ಸಲ್ಲಿಸಿದ್ದು, ಅವುಗಳು ವಜಾ ಆಗಿದ್ದು, ನಾವು ನ್ಯಾಯಾಲಯದಲ್ಲಿ ಮರೆಮಾಚಿದ್ದೇವೆ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ನನಗೆ ಯಾವುದೇ ಅಧಿಕಾರ ಇಲ್ಲ ಎಂದರೆ ಸರಿಯಲ್ಲ.

This is a True Copy of the Court Records Online. Authenticated @ districts.ecourtsindia.com/cnr/KABR030000992012/truecopy/order-3.pdf

**<u>ಮರು ವಿಚಾರಣೆ:</u>** ಇಲ್ಲ

ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನದ ಮೇರೆಗೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.

ಓ.ಹೇ.ಕೆ. ಸಹಿ ಮಾಡಿದ್ದಾರೆ

ಪ್ರಧಾನ ಸಿವಿಲ್ ನ್ಯಾಯಾಧೀಶರು
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು

This is a True Copy of the Court Records Online. Authenticated @ districts.ecourtsindia.com/cnr/KABR030000992012/truecopy/order-3.pdf

www.ecourtsindia.com